**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 11.06.2025**

**ಪಾಟೀ ಸವಾಲುಃ ಶ್ರೀ ಡಿ ಡಿ ಸಿ ವಕೀಲರಿಂದ**

ಚಾಸಾ **1** ನನ್ನ ಚಿಕ್ಕಪ್ಪ. ಚಾಸಾ **2** ಮತ್ತು **3** ನನಗೆ ಗೊತ್ತಿಲ್ಲ. ಚಾಸಾ **5** ಮತ್ತು **6** ನಾನು ನೋಡಿರುತ್ತೇನೆ ಆದರೆ ಪರಿಚಯ ಇರುವುದಿಲ್ಲ. ಸಿಸಿ ನಂ **740/2020** ರಲ್ಲಿ ನಾನು **2** ನೇ ಆರೋಪಿ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಹೆಚ್ ಎನ್ ಚಂದ್ರಶೇಖರ್. ನನ್ನ ಇನ್‌ನಶಿಯಲ್ ಸೂರ್ಯ ಹೆಚ್ ಸಿ . ನಾನು ಹೆಬ್ಬಾಲೆಯಲ್ಲಿ ವಾಸವಿರುತ್ತೇನೆ . ನಾನು ಸಿಸಿ **740/2020** ರಲ್ಲಿ ಬೇಲ್ ತೆಗೆದುಕೊಂಡಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಚಾಸಾ **1** ವಕೀಲರನ್ನು ನೇಮಕ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಿಃ **24.07.2020** ರಂದು ಬೆಳಗ್ಗೆ **11.30** ಗಂಟೆಗೆ ಚಾಸಾ **1** ರವರೊಂದಿಗೆ ಹೆಬ್ಬಾಲೆ ಗ್ರಾಮದ ಪಂಚಾಯಿತಿಗೆ ಹೋಗುತ್ತಿದ್ದೆ ಎಂದು ಹೇಳುವ ಸಂದರ್ಭದಲ್ಲಿ ಎಲ್ಲಿ ಕೆಲಸ ಮಾಡುಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೆಬ್ಬಾಲೆಯಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ . ನಾನು ಜುಲೈ **2020** ರಲ್ಲಿ ಬ್ಲ್ಯೂ ಮೂನ್ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಿಕೊಂಡಿರುವುದಿಲ್ಲ. ಚಾಸಾ **1** ರವರು ಕೃತ್ಯ ನಡೆದ ದಿನದಂದು ಚಡ್ಡಿ ಮತ್ತು ಶರ್ಟ್ ನ್ನು ಧರಿಸಿದ್ದರು . ಚಾಸಾ **1** ರವರು ಗ್ರೇ ಕಲರ್ ಟೀಶರ್ಟ್ ಮತ್ತು ಪಂಚೆಯನ್ನು ಧರಿಸಿದ್ದರು ಎಂದರೆ ಸರಿಯಲ್ಲ. ನಾನು ಶರ್ಟ್ ಮತ್ತು ಪ್ಯಾಂಟನ್ನು ಧರಿಸಿದ್ದೆ ಎಂದರೆ ಸರಿಯಲ್ಲ. ನಾನು ಬ್ಲಾಕ್ ಕಲರ್ ಟ್ರ್ಯಾಕ್ ಪ್ಯಾಂಟ್ ಮತ್ತು ಅದಕ್ಕೆ ಸಂಬಂದಪಟ್ಟ ಜರ್ಸಿಯನ್ನು ಧರಿಸಿದ್ದೆ ಎಂದರೆ ಸರಿಯಲ್ಲ. ಬಾಡಸ್ ಕಲ್ಲು ಒಂದು ಹಿಡಿಗಾತ್ರ ಇತ್ತು . ಬಾಡಸ್ ಕಲ್ಲು ಚರಂಡಿ ಪಕ್ಕದಲ್ಲಿ ಇತ್ತು . ಬಾಡಸ್ ಕಲ್ಲನ್ನು ಆರೋಪಿಯು ತೆಗೆದಿದ್ದನ್ನು ನಾನು ನೋಡಿರುತ್ತೇನೆ. ನಾನು

ನೋಡಿದ ಸ್ಥಳದಲ್ಲಿ ಸತೀಶ್ ರವರ ದಿನಸಿ ಅಂಗಡಿ ಇರುತ್ತದೆ . ಅದನ್ನು ಹೊರತು ಪಡಿಸಿ ಪಕ್ಕದಲ್ಲಿ ಒಂದು ಬೇಕರಿ ಇರುತ್ತದೆ ಮತ್ತು ಅದರ ಪಕ್ಕದಲ್ಲಿ ಒಂದು ಖಾಲಿ ಜಾಗ ಇರುತ್ತದೆ . ಚಾಸಾ **6** ರವರ ಅಂಗಡಿಯಲ್ಲಿ ಒಂದು ಸಿಸಿಟಿವಿ ಕ್ಯಾಮೇರಾ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಆ ಸಿಸಿಟಿವಿ ಕ್ಯಾಮೇರಾ ರೋಡನ್ನು ಕ್ಯಾಪ್ಚರ್ ಮಾಡುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನೋಡಿದಾಗ ಆರೋಪಿ ಸತೀಶ್ ರವರ ಅಂಗಡಿಯ ಮುಂದೆ ನಿಂತಿದ್ದರು. ಆರೋಪಿಯು ಸತೀಶ್ ರವರ ಅಂಗಡಿಯ ಬಳಿ ಏನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಸಂಬಂದಪಟ್ಟ ಕೆ ಎ **12** ಪಿ **3466** ಬೇಕರಿ ಪಕ್ಕದಲ್ಲಿ ಖಾಲಿ ಜಾಗದ ರೋಡ್ ನಲ್ಲಿ ನಿಂತಿರವುದನ್ನು ನಾನು ನೋಡಿರುವುದಿಲ್ಲ. ಬೆಳಗ್ಗೆ **11.13** ಗಂಟೆ ಸಮಯದಿಂದ **11.19.14** ಸೆಕೆಂಡ್ ಗಳು ಖಾಸಲಿ ಜಾಗದ ಪಕ್ಕದಲ್ಲಿ ಆರೋೀಪಿಯ ಫೋನ್ ನಲ್ಲಿ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ.

ಚಾಸಾ **1** ಮತ್ತು ಆರೋಪಿಗೂ ಎಷ್ಟು ವರ್ಷಗಳ ವೈಮನಸ್ಸು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಆರೋಪಿಗೂ ಮಾತುಕತೆ ಇರುವುದಿಲ್ಲ. ಹೆಬ್ಬಾಲೆ ಪಿಡಿಓ ರವರು ಚಾಸಾ **1** ರವರಿಗೆ ರೋಡ್ ಮಾರ್ಜಿನ್ ಬಿಡದಿದ್ದರೂ ಕೂಡ ಬಿಲ್ಡಿಂಗ್ ಕಟ್ಟಲು ಅನುಮತಿ ನೀಡಿದ ಬಗ್ಗೆ ಆರೋಪಿಯು ಪಿಡಿಓ ರವರ ಹತ್ತಿರ ಜಗಳ ಮಾಡಿದ್ದರಿಂದ, ಆರೋಪಿಗೂ ಮತ್ತು ಚಾಸಾ **1** ರವರಿಗೂ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ **1** ರವರ ಎಡಭಾಗದ ಬುಜದ ಮೇಲೆ ತರಚಿದ ಗಾಯವಾಗಲಿ ರಕ್ತ ಗಾಯವಾಗಲಿ ಆಗಿರುವುದನ್ನು ನಾನು ನೋಡಿರುವುದಿಲ್ಲ ಹಾಗೆ ಆರೋಪಿಯು ಚಾಸಾ **1** ರವರಿಗೆ ಯಾವ ಕಾಲಿನಿಂದ ಅವರ

ಬಲಕಾಲಿಗೆ ತುಳಿದರು ಎಂದು ನನಗೆ ಗೊತ್ತಿಲ್ಲ. ಚಾಸಾ **1** ರವರಿಗೆ ಯಾವಾಗ ಪ್ರಜ್ಞೆ ಬಂದಿದ್ದು ಎಂದರೆ ಸಾಕ್ಷಿಯು ಆಸ್ಪತ್ರೆಗೆ ಕರೆದುಕೊಂಡ ಹೋದ ನಂತರ ಪ್ರಜ್ಞೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ . ವೈದ್ಯರು ಚಾಸಾ **1** ರವರಿಗೆ ಚಿಕಿತ್ಸೆ ಕೊಡುವ ಸಮಯದಲ್ಲಿ ಅವರಿಗೆ ಪ್ರಜ್ಞೆ ಇತ್ತೋ ಇಲ್ಲವೋ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ . ಚಾಸಾ **1** ರವರನ್ನು ಕುಶಲನಗರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ . ಚಿಕಿತ್ಸೆಗೆ ಯಾರು ಯಾರು ಕರೆದುಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿಯು ನಾನು , ಶ್ರೀನಿವಾಸ ಮತ್ತು ಅಂಗಡಿ ಸತೀಶ್ ರವರು ಅಲ್ಲ ಹೆಬ್ಬಾಲೆಯಲ್ಲೇ ಇನ್ನೊಬ್ಬರು ಸತೀಶ್ ರವರು ಸೇರಿ ಕರೆದುಕೊಂಡು ಹೋಗಿರುತ್ತೇವೆ . ನಾನು ಯಾವ ಕಾರಿನಲ್ಲಿ ಚಾಸಾ **1** ರವರನ್ನು ಕರೆದುಕೊಂಡು ಹೋದೆ ಎಂದು ಇಲ್ಲಿಯ ತನಕ ಗೊತ್ತಿಲ್ಲ. ಹೆಬ್ಬಾಲೆಯಿಂದ ಕುಶಾಲನಗರ ಸರಕಾರಿ ಆಸ್ಪತ್ರೆ ಅಂದಾಜು **14-15** ಕಿ ಮೀ ಇರಬೇಕು . ಬೆಳಗ್ಗೆ **11.30** ಗಂಟೆಯಿಂದ ಮದ್ಯಾಹ್ನ **1.30** ಗಂಟೆ ತನಕ ನಾನು ಮತ್ತು ನನ್ನ ಚಿಕ್ಕಪ್ಪ ಎಲ್ಲಿದ್ದಿರಿ ಎಂದರೆ ಸಾಕ್ಷಿಯು ಬೆಳಗ್ಗೆ **11.30** ಗಂಟೆ ಸಮಯಕ್ಕೆ ಗಲಾಟೆ ನಡೆದಿರುತ್ತದೆ , ಮತ್ತು ಆಸ್ಪತ್ರೆಗೆ ಎಷ್ಟು ಒತ್ತಿಗೆ ಕರೆದುಕೊಂಡು ಹೋಗಿರುತ್ತೇವೇ ಎಂದು ನನಗೆ ನೆನಪಿಲ್ಲ. ನಾವು ಚಾಸಾ **1** ರವರನ್ನು ಉಪಚರಿಸುವ ಸಮಯದಲ್ಲಿ ಪ್ರಜ್ಞೆ ಇರುವುದಿಲ್ಲ. ವೈದ್ಯರು ಚಾಸಾ **1** ರವರನ್ನು ಉಪಚರಿಸುವ ಸಮಯದಲ್ಲಿ ನಾನು ವೈದ್ಯರ ಕೊಟ್ಟಡಿಯಲ್ಲಿ ಇರಲಿಲ್ಲ. ವೈದ್ಯರಿಗೆ ಯಾರು ಮಾಹಿತಿ ಹೆಳಿದರು ಎಂದು ನನಗೆ ಗೊತ್ತಿಲ್ಲ. ವೈದ್ಯರು ಚಿಕಿತ್ಸೆ ಕೊಟ್ಟು ಎಷ್ಟು ಕಾಲದ ಸಮಯದಲ್ಲಿ ಚಾಸಾ **1** ರವರು ಹೊರಗಡೆ ಬಂದರು ಎಂದರೆ ಸಾಕ್ಷಿಯು ಸುಮಾರು ಅರ್ಧ ಗಂಟೆ ಸಮಯದ ನಂತರ ಹೊರ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ . ಹೊರಗಡೆ ಬಂದ ಸಮಯದಲ್ಲಿ

ಸತೀಶ್ ಮತ್ತು ಶ್ರೀನಿವಾಸರವರು ಚಾಸಾ **1** ರವರ ಜೊತೆ ಇದ್ದರು **.**ಚಾಸಾ **1** ಹೊರಗಡೆ ಬಂದ ಅವರನ್ನು ನಾನು ಎಕ್ಸರೇಗೆ ಕರೆದುಕೊಂಡು ಹೋಗಿರುತ್ತೇನೆ **.** ನಾನು ಎಕ್ಸರೇನ್ನು ಪ್ರೈವೆಟ್ ಡಯೋನಿಗ್ನಸ್ಟಿಕ್ ಸೆಂಟರ್ ನಲ್ಲಿ ಮಾಡಿಸಿರುತ್ತೇನೆ**.** ಎಕ್ಸರೇ ಮಾಡಿಸುವುದಕ್ಕೆ ಕೊಟ್ಟ ಪ್ರಿಕ್ಸಿಪಕ್ಷನ್ ಯಾರ ಬಳಿ ಇತ್ತು ಎಂದು ನನಗೆ ಗೊತ್ತಿಲ್ಲ**.** ನಾನು ಪ್ರಿಕ್ಸಿಪಕ್ಷನ್ ನ್ನು ನಾನು ನೋಡಿರುವುದಿಲ್ಲ ಕಾರಣ ಸತೀಶ್ ರವರು ಚಾಸಾ **1** ರವರನ್ನು ಒಳಗಡೆ ಕರೆದುಕೊಂಡು ಹೋಗಿರುತ್ತಾರೆ **.**

ನ್ಯಾಯಾಲಯದ ಸಮಯ 5.20 ಆದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ